ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 11/07/2019

# ಕ್ರಮಬದ್ಧ ರಾಜೀನಾಮೆಗೆ ಸ್ಪೀಕರ್ ಸೂಚನೆ

ಕ್ರಮಬದ್ಧವಲ್ಲದ ರೀತಿಯ ರಾಜೀನಾಮೆ ಸಲ್ಲಿಸಿರುವ ಎಂಟು ಶಾಸಕರಿಗೆ ನಿಯಮದ ಪ್ರಕಾರ ರಾಜೀನಾಮೆ ಪತ್ರ ಸಲ್ಲಿಸುವಂತೆ ಸ್ಪೀಕರ್ ರಮೇಶ್ ಕುಮಾರ್ ಸೂಚನೆ ನೀಡಿದ್ದಾರೆ. ಆದರಂತೆ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ್ ಪುತ್ರ ಬುಧವಾರ ಪರಿಷ್ಕೃತ ರಾಜೀನಾಮೆ ಪತ್ರ ತಂದು ಕೊಟ್ಟಿದ್ದಾರೆಂದು ವಿಧಾನಸಭೆ ಸಚಿವಾಲಯ ಮೂಲಗಳು ಹೇಳಿವೆ. ವಿಧಾನಸಭೆ ನಿಯಮಗಳ 202ರ ಪ್ರಕಾರ ಇಂತಹ ದಿನಾಂಕದಿಂದ ಅನ್ವಯವಾಗುವ ರೀತಿ ರಾಜೀನಾಮೆ ನೀಡುತ್ತಿದ್ದೇನೆ ಎಂಬ ಒಂದೇ ಸಾಲಿನಲ್ಲಿ ಬರೆದುಕೊಡಬೇಕು. ಇದಕ್ಕಿಂತ ಹೆಚ್ಚಿಗೆ ಪದಗಳಿದ್ದರೆ ಅದು ಕ್ರಮಬದ್ಧವಾಗುವುದಿಲ್ಲ. ಈಗಲೂ ಅದೇ ರೀತಿ ಆಗಿದೆ ಎಂದು ಮೂಲಗಳು ಹೇಳಿವೆ. ಎಂಟು ರಾಜೀನಾಮೆ ಪತ್ರಗಳನ್ನು ಒಬ್ಬರೇ ಸಿದ್ಧಪಡಿಸಿದ್ದಾರೆ. ಶಾಸಕರು ಕೇವಲ ಸಹಿ ಹಾಕಿದ್ದಾರೆ. ಎಲ್ಲವೂ ಒಂದೇ ರೀತಿಯಲ್ಲಿ ತಪ್ಪಾಗಿದೆ. ಆದ್ದರಿಂದ ಅಂಗೀಕಾರವಾಗಿಲ್ಲ ಎಂದು ಮೂಲಗಳು ಹೇಳಿವೆ.

**ನಾನು ಯಾವ ಪ್ರಭಾವ, ಪ್ರಲೋಭನೆಗೂ ಒಳಗಾಗುವುದಿಲ್ಲ. ನಿರ್ಲಿಪ್ತನಾಗಿದ್ದು, ಕಾನೂನು, ನಿಯಮಾವಳಿ ಪ್ರಕಾರವೇ ತೀರ್ಮಾನ ತೆಗೆದುಕೊಳ್ಳುತ್ತೇನೆ. ನನಗೇನು ಟೆನ್ಷನ್ ಇಲ್ಲ. ಎಷ್ಟು ಜನರು ರಾಜೀನಾಮೆ ಕೊಟ್ಟರೂ ತೆಗೆದುಕೊಳ್ಳುತ್ತೇನೆ. ನನ್ನ ಕೆಲಸ ನಾನು ಮಾಡುತ್ತೇನೆ**

**| ರಮೇಶ್‌ಕುಮಾರ್ ಸ್ಪೀಕರ್**



7